

ಯುವಕನೊಬ್ಬ ಯುವತಿಯನ್ನು ನೋಡಲು ಹಳ್ಳಿಗೆ ಹೋದ. ಯುವತಿಯ ಮನೆಯಲ್ಲಿ ಅವನು ತನ್ನ ತಂದೆ, ತಾಯಿಯವರೊಂದಿಗೆ ಕೂತ. ಕ್ಷೇಮ, ಸಮಾಚಾರದ ನಂತರ ಯುವತಿ ಅವರಿಗೆ ಉಪ್ಪಿಟ್ಟು, ಕಾಫಿ ತಂದಳು. ಇದ್ದಕ್ಕಿದ್ದಂತೆ ಯುವಕನ ಮೊಬೈಲ್ ರಿಂಗಾಯಿತು.

'ಹದಿನೈದು ಲಕ್ಷದ ಡೀಲ್ ಏನಾಯ್ತು? ನಾನು ನಾಳೆ ಲಂಡನ್‌ಗೆ ಹೋಗ್ತಿದ್ದೇನೆ, ನಾನೀಗಲೇ ಭೇಟಿಯಾಗಲು ಸಾಧ್ಯವಿಲ್ಲ' ಎಂದು ಯುವಕ ಮೊಬೈಲಿಗೆ ಉತ್ತರಿಸಿ ಯುವತಿಗೆ ಹೇಳಿದ. 'ಸಾರಿ, ಮಾತಿನ ಭರಾಟೆಯಲ್ಲಿ ನೀವು ಕಾಫಿ, ತಿಂಡಿ ಇಟ್ಟಿದ್ದನ್ನು ಮರೆತೆ'

'ಅದ್ಸರಿ, ಆದ್ರೆ ಈ ಹಳ್ಳಿಯಲ್ಲಿ ಯಾವ ಕಂಪನಿಯ ಸಿಗ್ನಲ್ಲೂ ಬರುವುದಿಲ್ಲವೆಂಬುದನ್ನು ನೀವು ಮರೆತಿದ್ದೀರಿ!' ಎಂದಳಾಕೆ!

★★★

ಸೈಕಲ್ ಚಾಲನೆ ಮಾಡುತ್ತಿದ್ದ ಯುವಕನೊಬ್ಬ, ರಸ್ತೆಯ ಅಂಚಿನಲ್ಲಿ ಹೋಗುತ್ತಿದ್ದ ಹಿರಿಯರೊಬ್ಬರಿಗೆ ಡಿಕ್ಕಿ ಹೊಡೆದ. ಅವರಿಗೆ ಸಣ್ಣಪುಟ್ಟ ತರಚಾಯಿತು.

'ಸಾರ್, ನೀವು ತುಂಬಾ ಅದೃಷ್ಟವಂತರು' ಯುವಕ ನಕ್ಕ.

'ನೀನು ನನಗೆ ಡಿಕ್ಕಿ ಹೊಡೆದು ನನ್ನನ್ನೇ ಅದೃಷ್ಟವಂತ ಅಂತಿದ್ದೀಯಲ್ಲಾ?' ಹಿರಿಯರು ರೇಗಿದರು.

'ಇವತ್ತು ನನಗೆ ರಜ ಇದೆ. ಹೀಗಾಗಿ ಸೈಕಲ್‌ನಲ್ಲಿ ಹೋಗ್ತಿದ್ದೇನೆ. ಬೇರೆ ದಿನಗಳಾಗಿದ್ದರೆ, ನಾನು ಟ್ರಕ್ ಚಾಲನೆ ಮಾಡುತ್ತಿದ್ದೆ' ಯುವಕ ಮತ್ತೆ ನಕ್ಕ.

★★★

ಸುಪ್ರಸಿದ್ಧ ವಿಜ್ಞಾನಿಗಳಾಗಿದ್ದ ಎಡಿಸನ್ ಅವರು ಸಾಮಾನ್ಯವಾಗಿ ಸಭೆ ಸಮಾರಂಭಗಳಿಗೆ ಹೋಗುತ್ತಿರಲಿಲ್ಲ. ಆದರೆ ಒಮ್ಮೆ ಅವರು ತಮ್ಮ ಆಪ್ತ ಮಿತ್ರ ಏರ್ಪಡಿಸಿದ್ದ ಸಮಾರಂಭಕ್ಕೆ ಹೋಗಬೇಕಾಯಿತು. ಅಲ್ಲಿ ನೆರೆದ ಗುಂಪಿನಿಂದ ಎಡಿಸನ್ ಅವರು ಗಾಬರಿಯನ್ನು ಅನುಭವಿಸಿ, ಅಲ್ಲಿಂದ ಮರಳಿ ಹೋಗುವ ಬಗ್ಗೆ ಯೋಚಿಸಲು ಆರಂಭಿಸಿದರು. ಆಪ್ತ ಮಿತ್ರ ಅವರ ಬಳಿಗೆ ಬಂದು ಹೇಳಿದ, 'ಬನ್ನಿ ಬನ್ನಿ, ಅಲ್ಲಿ ಯಾಕೆ ನಿಂತಿದ್ದೀರಿ? ಕುಳಿತುಕೊಳ್ಳಿ. ಈಚೆಗೆ ನೀವು ಯಾವುದರ ಬಗ್ಗೆ ಸಂಶೋಧನೆಯನ್ನು ಮಾಡುತ್ತಿದ್ದೀರಿ?'

'ಸದ್ಯಕ್ಕೆ ನಾನು ಇಲ್ಲಿಂದ ಓಡಿ ಹೋಗುವ ಬಗ್ಗೆ ಸಂಶೋಧನೆಯನ್ನು ಮಾಡುತ್ತಿದ್ದೇನೆ!' ಎಂದು ಎಡಿಸನ್ ಮೆಲ್ಲನೆ ಉಸಿರಿದರು.

**(ಸಂಗ್ರಹ) ಡಿ.ಎನ್.ಶ್ರೀನಾಥ್, ಶಿವಮೊಗ್ಗ**

ಯಜಮಾನಿ: ಕರೆಂಟ್ ಬರೋವರ್ಗೂ ಹಾಗೇ ಅಲುಗಾಡದೇ ನಿಂತುಕೋ ಸರೋಜ. ಜಾರಿಬಿದ್ದೀಯೆ ಹುಷಾರು.

ಕೆಲಸದಾಕೆ: ಚಿಂತೆ ಮಾಡಬೇಡಿ ಅಮ್ಮಾವ್ರೇ! ಯಜಮಾನರು ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ.

★★★

ಗುಂಡ: ಅಲ್ವೇ ನೀನು ಹೀಗೆ ಲಕ್ಷಾಂತರ ರೂಪಾಯಿ ಸಾಲ ಮಾಡಿದ್ದೀಯಲ್ಲಾ. ಹೇಗೆ ತೀರಿಸ್ತೀಯಾ? ನಿನಗೆ ನಿದ್ದೆಯಾದರೂ ಹೇಗೆ ಬರುತ್ತದೆ?

ಹೆಂಡತಿ: ಅಯ್ಯೋ ನನಗೆ ನಿದ್ದೆ ಬರದೇ ಏನ್ರೀ! ಹಾಗೆ ನಿದ್ದೆ ಬರದೇ ಒದ್ದಾಡೋಳು ನಾನಲ್ಲ! ನನಗೆ ಸಾಲ ಕೊಟ್ಟಿದ್ದಾರಲ್ಲ ಅವರು.

★★★

ಮ್ಯಾನೇಜರ್: ಸಾರ್ ಲೇಡೀಸ್ ಹಾಸ್ಟೆಲ್‌ನಿಂದ ಮಾತಾಡ್ತಾ ಇರೋದು! ಇಲ್ಲಿ ಕರೆಂಟು ಹೊರಟುಹೋಗಿದೆ. ದಯವಿಟ್ಟು ಯಾರನ್ನಾದರೂ ಕಳುಹಿಸುತ್ತೀರಾ?

ಕೆ.ಇ.ಬಿ. ಅಧಿಕಾರಿ: ಅರೆ ಹೌದಾ? ಛೆ ಎಂಥಾ ಕೆಲಸವಾಯ್ತು. ಈಗ ಇಲ್ಲಿ ಯಾರೂ ಇಲ್ವಲ್ಲಾ ಸಾರ್! ಯೋಚ್ನೆ ಮಾಡಬೇಡಿ. ಹತ್ತೇ ನಿಮಿಷ. ನಾನೇ ಬಂದುಬಿಡ್ತೀನಿ.

**(ಸಂಗ್ರಹ) ಎಂ.ಕೆ.ಮಂಜುನಾಥ್, ಬೆಂಗಳೂರು**

